**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS 110/2022** **DW- 1**

ದಿಃ **22.03.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ ವಾದಿ ಪರ ಶ್ರೀ ಕೆ ಸಿ ಪಿ ವಕೀಲರಿಂದಃ**

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರ ತಯಾರಿಸಲು ನಾನು ಹಾಗೂ ಪ್ರತಿವಾದಿ ನಂ.1 ಮತ್ತು 2 ಮಾಹಿತಿ ನೀಡಿರುತ್ತೇವೆ. ನಾನು ಅವರ ಪರವಾಗಿ ಸಹ ಈಗ ಸಾಕ್ಷಿ ನುಡಿಯುತ್ತಿದ್ದೇನೆ. ಈ ದಾವೆಯನ್ನು ನಾವು ತಾಯಿ ಮಗಳು ಸೇರಿ ಸಲ್ಲಿಸಿರುತ್ತೇವೆ. ಕೊಟ್ಟ ಹೊಲವನ್ನು ಮರಳಿ ತೆಗೆದುಕೊಳ್ಳಲು ಹಾಗೂ ಆಸ್ತಿ ಕಬ್ಜೆ ಪಡೆದುಕೊಳ್ಳಲು ನಾವು ಈ ದಾವೆ ಸಲ್ಲಿಸಿರುತ್ತೇವೆ. ವಾದಿ ನನ್ನ ಮೈದುನ ರಾಮಪ್ಪ ಇವರ ಮಗ ಆಗಿರುತ್ತಾನೆ. ಆತನನ್ನು ರಾಮಪ್ಪನ ಮಗ ನಿಂಗಪ್ಪ ಇವರಿಗೆ ದತ್ತಕ ಕೊಡಲಾಗಿತ್ತು ಎಂದರೆ ಸುಳ್ಳು. ನನಗೆ ಓದು ಬರೆಯಲು ಬರುವುದಿಲ್ಲ. ವಾದಿ ತಾನು ದತ್ತಕ ಮಗ ಎಂದು ಹೇಳಿ ಈ ದಾವೆ ಸಲ್ಲಿಸಿರುತ್ತಾರೆ. ಅವರು ತಾನು ದತ್ತಕ ಆಗಿರುತ್ತೇವೆ ಎಂದು ನಮಗೆ ನೋಟಿಸು ಕಳುಹಿಸಿದರು ನಂತರ ನಾವು ನ್ಯಾಯಾಲಯದಲ್ಲಿ ಹಾಜರಾಗಿ ಅವರು ದತ್ತಕ ಮಗ ಅಲ್ಲ ಎಂದು ಹೇಳಿರುತ್ತೇವೆ.

2. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ನಾನು ಹಾಗೂ ಪ್ರತಿವಾದಿ ನಂ.1 ಮತ್ತು 2 ಸೇರಿ ನನ್ನ ಗಂಡನ ವಿರುದ್ದ ಅಸಲು ದಾವಾ ಸಂಖ್ಯೆ 801/2012 ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ವಾದ ಪತ್ರ ತಯಾರಿಸಲು ನಾವೇ ಮಾಹಿತಿ ಸಲ್ಲಿಸಿರುತ್ತೇವೆ. ಸದರಿ ದಾವೆಯಲ್ಲಿ ವಾದಿಯ ಹೆಸರನ್ನು ನಿಂಗಪ್ಪನ ದತ್ತಕ ಮಗ ಎಂದು ತೋರಿಸಿಲ್ಲ ಹಾಗೂ ಆತನ ಜನಕ ತಂದೆಯ ಹೆಸರನ್ನು ತೋರಿಸುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿ ಆತ ದತ್ತಕ ಆಗೇ ಇಲ್ಲ ಎಂದು ನುಡಿಯುತ್ತಾರೆ. ಸುಮಾರು 2 ವರ್ಷಗಳ ಹಿಂದೆ ವಾದಿ ನೋಟಿಸು ಕಳುಹಿಸಿದ್ದು ತಾನು ದತ್ತಕ ಮಗ ಎಂದು ಹೇಳಿದಾಗ ಸದರಿ ವಿಷಯ ನನಗೆ ಗೊತ್ತಾಯಿತು.

3. ಈ ದಾವೆಯಲ್ಲಿ ಸಲ್ಲಿಸಿದ ದಾಖಲೆಗಳ ಬಗ್ಗೆ ನಾನು ವಕೀಲರಿಂದ ತಿಳಿದುಕೊಂಡಿರುತ್ತೇನೆ. ವಾದಿಯವರು ದಿಃ 03.05.2007 ರಂದು ತಾನು ದತ್ತಕ ಹೋದ ಬಗ್ಗೆ ಹಾಗೂ ಸದರಿ ದಾಖಲೆಯನ್ನು ದಿಃ 04.05.2007 ರಂದು ನೊಂದಣಿ ಆದ ಬಗ್ಗೆ

ದಾಖಲೆ ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ನಾನು ನಮ್ಮ ವಕೀಲರ ಮುಖಾಂತರ ಓದಿ ತಿಳಿದುಕೊಂಡಿರುತ್ತೇನೆ. ನಿಂಗಪ್ಪ ಸ್ವಾದಿ ಇವರ ಕುಟುಂಬದ ಪರಿಚಯ ನನಗೆ ಇದೆ. ನಿಂಗಪ್ಪ ಸ್ವಾದಿ ಇವರನ್ನು ನಾನು ನೋಡಿರುವುದಿಲ್ಲ. ನವಲೂರ ಕುಟುಂಬದವರು ಸಹ ನಮ್ಮ ಊರಿನಲ್ಲಿದ್ದಾರೆ ಆದರೆ ಅವರು ಸದರಿ ಎರಡು ಕುಟುಂಬದವರು ಅಂತಹವರೇ ಎಂದು ನನಗೆ ಗೊತ್ತಾಗುವುದಿಲ್ಲ. ಅದೇ ರೀತಿ ಬಿಕ್ಕಣ್ಣವರ ಕುಟುಂಬದವರು ನಮ್ಮ ಊರಿನಲ್ಲಿದ್ದಾರೆ. ಸದರಿಯವರ ಹತ್ತಿರ ಹೋಗಿ ನಿಪಿ.9 ದಾಖಲೆ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಾನು ತಿಳಿದುಕೊಂಡಿಲ್ಲ ಹಾಗೂ ಅವರು ಸಹಿ ಮಾಡಿದ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಂಗಪ್ಪ ಸ್ವಾದಿ, ಶಿವಾನಂದ ನವಲೂರ, ಮಲ್ಲಪ್ಪ ವಿರಪ್ಪ ಬಿಕ್ಕಣ್ಣವರ ಇವರನ್ನು ಈ ದಾವೆ ಸಲ್ಲಿಸಿದ ನಂತರ ನಾನು ಬೇಟಿ ಆಗಿಲ್ಲ ಹಾಗೂ ನಿಪಿ.9 ದಾಖಲೆ ಬಗ್ಗೆ ಅವರ ಕಡೆಯಿಂದ ತಿಳಿದುಕೊಂಡಿಲ್ಲ. ನಿಪಿ.9 ದಾಖಲೆ ಪ್ರಕಾರ ವಾದಿ ದತ್ತಕ ಹೋದ ವಿಷಯ ನಿಜ ಇದ್ದ ಕಾರಣ ನಾನು ಸದರಿ ಸಾಕ್ಷಿದಾರರ ಹತ್ತಿರ ಹೋಗಿ ವಿಷಯ ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ.

4. ನಾವು ದಾವೆಯಲ್ಲಿ ಏನು ತಕರಾರು ಸಲ್ಲಿಸಿರುತ್ತೇವೆಂದು ನೋಡಿ ತಿಳಿದುಕೊಂಡು ಸಹಿ ಮಾಡಿರುತ್ತೇವೆ. ಈ ದಾವೆಯಲ್ಲಿ ನಿಪಿ.9 ದತ್ತಕ ಪತ್ರ ರದ್ದು ಆಗಬೇಕು ಎಂದು ನಾವು ಎದುರು ಕ್ಲೇಮ್ ಸಲ್ಲಿಸಿಲ್ಲ. ಅದೇ ರೀತಿ ಸದರಿ ದಾಖಲೆ ಪ್ರಶ್ನಿಸಿ ಪ್ರತ್ಯೇಕ ದಾವೆ ಸಲ್ಲಿಸಿಲ್ಲ. ನಿಪಿ.9 ನಿಜವಾದ ದಾಖಲೆ ಆಗಿದೆ ಹಾಗೂ ವಾದಿ ದತ್ತಕ ಹೋದ ವಿಷಯ ನಿಜ ಇದೆ ಎಂದು ನನಗೆ ಗೊತ್ತಿದ್ದ ಕಾರಣ ನಾನು ಅದನ್ನು ಪ್ರಶ್ನಿಸಿ ಎದುರು ಕ್ಲೇಮ್ ಅಥವಾ ಪ್ರತೇಕ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ವಾದೀ ನಿಂಗಪ್ಪ ಇವರಿಗೆ ದತ್ತಕ ಹೋದಾಗಿನಿಂದ ಅವರ ಜೀವಿತಾವಧಿಯಲ್ಲಿ ವಾದಿ ಹಾಗೂ ಸದರಿ ನಿಂಗಪ್ಪ, ಅವರ ಮರಣಾನಂತರ ವಾದಿಯ ನಿಂಗಪ್ಪನ ಆಸ್ತಿಯ ಕಬ್ಜಾ ವಹಿವಟಿನಲ್ಲಿ ಇದ್ದಾರೆ ಹೌದು ಆದರೆ ನನ್ನ ಗಂಡನ ಹಿಸ್ಸೆ ನನಗು ಬರಬೇಕು ಎಂದು ನುಡಿಯುತ್ತಾರೆ.

5. ನಮ್ಮ ಮನೆತನ ಮೂಲ ಪುರುಷ ರಾಮಪ್ಪ ತಂದೆ ಕಲ್ಲಪ್ಪ ಮೊರಬದ. ಅವರಿಗೆ ಮೂರು ಜನ ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು ಎಂದರೆ ಸರಿ. ಅವರಿಗೆ ಕಲ್ಲಪ್ಪ, ನಿಂಗಪ್ಪ, ಮಹಾದೇವಪ್ಪ ಮತ್ತು ನೀಲವ್ವ ಎಂಬುವವರು ಮಕ್ಕಳು ಎಂದರೆ ಸರಿ. ಅಸಲು ದಾವಾ ಸಂಖ್ಯೆ 801/2012 ರಲ್ಲಿ ನೀಲವ್ವ ಅಂದರೆ ರಾಮಪ್ಪನ ಮಗಳು ಹಾಗೂ ನನ್ನ

ಗಂಡನ ಸೋದರ ಅತ್ತೆಯನ್ನು ಪಕ್ಷಗಾರನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರಸ್ತುತ ವಾದಿ ಈತನು ನಿಂಗಪ್ಪನ ಮಗ ಎಂದು ಹೇಳಿ ಆತನನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ವಾದಿಯ ಜನಕ ತಂದೆ ರಾಮಪ್ಪನ ತಂದೆ ಮಹಾದೇವಪ್ಪ ಎಂದರೆ ನಿಜ. ಸದರಿ ದಾವೆಯಲ್ಲಿ ವಾದಿಯ ದತ್ತಿಕ ತಂದೆ ಹೆಸರು ತಿಳಿಸದೇ ಆತನ ಜನಕ ತಂದೆ ಮುಖಾಂತರ ಸಂಬಂದಿಸಿರುತ್ತಾರೆ ಎಂದು ವಂಶಾವಳಿಯಲ್ಲಿ ತೋರಿಸಿ ಕೈ ಬಿಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಮೂಲ ಪುರುಷ ರಾಮಪ್ಪ ತಂದೆ ಕಲ್ಲಪ್ಪ ಮೊರಬದ ಇವರ ಅವಿಭಕ್ತ ಕುಟುಂಬದ ಆಸ್ತಿಗಳಲ್ಲಿ ಹಿಸ್ಸೆ ಆಗಿಲ್ಲ ಎಂದು ಹೇಳಿರುತ್ತೇವೆ ಎಂದರೆ ಸರಿ. ಸದರಿ ಮೂಲ ಪುರುಪ್ಪ ರಾಮಪ್ಪನ ಆಸ್ತಿಯಲ್ಲಿ ಹಿಸ್ಸೆ ಆಗಿಲ್ಲದ ಕಾರಣ ಆತನ ವಾರಸುದಾರರಿಗೆ ಆಸ್ತಿಗಳಲ್ಲಿ ಹಿಸ್ಸೆ ಇದೆ ಎಂದರೆ ಸರಿ. ಈ ದಾವಾ ಆಸ್ತಿಗಳು ಮೂಲ ಪುರುಷ ರಾಮಪ್ಪ ಕಡೆಯಿಂದ ಬಂದ ಹಿರಿಯರ ಆಸ್ತಿಗಳು ಎಂದರೆ ಸರಿ. ರಾಮಪ್ಪ ತೀರಿಕೊಂಡ ನಂತರ ದಾವಾ ಆಸ್ತಿಗಳಲ್ಲಿ ಅವರ ವಾರಸುದಾರರ ಮದ್ಯೆ ಕಾನುನುಬದ್ದವಾಗಿ ಪಾಲು ವಿಬಾಗ ಆಗಿಲ್ಲ ಎಂದರೆ ನಿಜ. ಕಲ್ಲಪ್ಪನ ಮಗ ಬಸವಣ್ಣೆಪ್ಪ ಮಗ ತೀರಿಕೊಂಡು 3 ವರ್ಷ ಆಯಿತು. ಪ್ರತಿವಾದಿ ನಂ.5 ರಿಂದ 9 ಅವರ ವಾರಸುದಾರರಾಗಿರುತ್ತಾರೆ.

**ವಾದಿ ಪರ ವಕೀಲರು ಮುಂದುವರೆದ ಪಾಟಿಸವಾಲಿಗೆ ಕಾಲಾವಕಾಶ ಕೇಳಿದ್ದು ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-
**(**ಶ್ರೀಮತಿ ದೀಪಾ ಜಿ ಮನೇರಕರ**)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.